ಸಾಕ್ಷಿಯನ್ನು ಪುನಃ ದಿ.02.03.2026 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿ :**

7. ಹಲ್ಲೆ ಆಯಿತು ಎಂದು ಹೇಳುವ ರಸ್ತೆ ಸಾರ್ವಜನಿಕರು ಉಪಯೋಗಿಸುವ ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ದೂರನ್ನು ದಿ.25.06.2019 ರಂದು ಕೊಟ್ಟಿದ್ದೇನೆ. ದಿ.24.05.2019 ರಂದು ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ.32/2 ಬಿ 36 ಗುಂಟೆ ಮತ್ತು ಸ.ನಂ.9/1 ರಲ್ಲಿ 6 ಎಕರೆ ಜಮೀನು ನಮ್ಮದು ಎಂದು ತೋರಿಸಲು ಪೋಲೀಸರಿಗೆ ದಾಖಲೆ ಕೊಟ್ಟಿಲ್ಲ. ನಮಗೂ ಆರೋಪಿತರಿಗೂ ಮೊದಲಿನಿಂದ ವೈಷಮ್ಯ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನದಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ರಸ್ತೆಯ ಎಡಭಾಗದಲ್ಲಿ ಮುಳ್ಳಿನ ಬೇಲಿ ಇದೆ. ನಾನು ಬೈಕಿನಲ್ಲಿ ಬರುವಾಗ ಸ್ಕಿಡ್ ಆಗಿ ಮುಳ್ಳಿನ ಬೇಲಿಯ ಮೇಲೆ ಬಿದ್ದು ಬಟ್ಟೆ ಹರಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಘಟನೆ ನಡೆದಿಲ್ಲ, ಆರೋಪಿತರು ನನಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

8. 1 ನೇ ಆರೋಪಿ ರಾಮಚಂದ್ರಯ್ಯ ದೊಣ್ಣೆಯಿಂದ ನನ್ನ ಬಲಭುಜಕ್ಕೆ ಬಲವಾಗಿ ಹೊಡೆದನು, 4 ನೇ ಆರೋಪಿ ಮಂಜುನಾಥ ಕಬ್ಬಿಣದ ರಾಡಿನಿಂದ ನನ್ನ ಬಲಭುಜಕ್ಕೆ ಬಲವಾಗಿ ಹೊಡೆದನು, 2 ನೇ ಆರೋಪಿ ಲಕ್ಷ್ಮಮ್ಮ ಮಚ್ಚಿನ ಹಿಂಬದಿಯಿಂದ ನನ್ನ ಮುಂಗೈಗೆ ಹೊಡೆದಳು, ಆಗ 3 ನೇ ಆರೋಪಿ ಜಯರಾಮ ಚಾಕುವಿನಿಂದ ನನ್ನ ಎಡಮೊಣಕೈಗೆ ರಕ್ತ ಬರುವ ಹಾಗೆ ಚುಚ್ಚಿದನು, ಆಗ 4 ನೇ ಆರೋಪಿ ಮಂಜುನಾಥ ಕಬ್ಬಿಣದ ರಾಡಿನಿಂದ ನನ್ನ ಸೊಂಟಕ್ಕೆ ಬಲವಾಗಿ ಹೊಡೆದನು, 1 ನೇ ಆರೋಪಿ ರಾಮಚಂದ್ರಯ್ಯ ಬಲಕಾಲಿನಿಂದ ನನ್ನ ಬಲಎದೆಗೆ ಎರಡು ಬಾರಿ ಒದ್ದನು, 4 ನೇ ಆರೋಪಿ ಮಂಜುನಾಥ ಕಾಲುಗಳಿಂದ ನನ್ನ ಬಲಎದೆಗೆ ಒದ್ದು, ಮುಷ್ಠಿಯಿಂದ ಬಲಎದೆಗೆ ಗುದ್ದಿದನು, ನಂತರ 2 ನೇ ಆರೋಪಿ ಲಕ್ಷ್ಮಮ್ಮ ಕಾಲಿನಿಂದ ನನ್ನ ಗುಪ್ತಾಂಗದ ಮೇಲೆ 3-4 ಬಾರಿ ಒದ್ದು, ತನ್ನ ಕೈನಿಂದ ನನ್ನ ತಲೆಯ ಜುಟ್ಟನ್ನು ಹಿಡಿದು ತಲೆಯನ್ನು ನೆಲಕ್ಕೆ ಅಪ್ಪಳಿಸಿರುತ್ತಾಳೆ, 4 ನೇ ಆರೋಪಿ ಮಂಜುನಾಥ ನನ್ನನ್ನು ಕೊಲೆ ಮಾಡುತ್ತೇನೆ, ಸ್ಮಶಾನಕ್ಕೆ ಕಳುಹಿಸುತ್ತೇನೆಂದು ತನ್ನ ಯೂನಿಕಾರ್ನ್ ಗಾಡಿಯನ್ನು ನನ್ನ ಎಡಕೈ ಮೇಲೆ ಹತ್ತಿಸಿದನು, 2 ನೇ ಆರೋಪಿ ಲಕ್ಷ್ಮಮ್ಮ ನೀನು ಹೊಲೆ ಮಾದಿಗರ ಮನೆಯಲ್ಲಿ ವಾಸ ಮಾಡುತ್ತೀಯ, ಅವರ ಮನೆಯಲ್ಲೇ ಊಟ ತಿಂಡಿ ಮಾಡುತ್ತೀಯ, ನಿನಗೆ ಯಾವುದೇ ರೀತಿ ಸ್ವಾಭಿಮಾನ

ಇರುವುದಿಲ್ಲ, ನನ್ನ ಗಂಡ ತಿಗಳ ಜನಾಂಗದಲ್ಲಿ ಉನ್ನತ ಅಧಿಕಾರಿಯಾಗಿರುತ್ತಾನೆ, ಅವನಿಗೆ ಹೇಳಿ ನಿನ್ನನ್ನು ಕುಲದಿಂದ ಹೊರ ಹಾಕಿಸುತ್ತೇನೆಂದು ಹೇಳಿರುತ್ತಾಳೆ, 4 ನೇ ಆರೋಪಿ ಮಂಜುನಾಥ ನೀನು ವಕೀಲನಾಗಿದ್ದರೆ ಕೋರ್ಟಿನಲ್ಲಿ, ಇಲ್ಲಿ ಅಲ್ಲ ಎಂದು ಹೇಳಿರುತ್ತಾನೆ, ನೀವು ವಕೀಲರೆಲ್ಲಾ ತಾಯಿ ಮತ್ತು ಹೆಂಡತಿ ಗೆ ವ್ಯತ್ಯಾಸವನ್ನು ತಿಳಿಯದೇ ಇರತಕ್ಕಂತಹವರು, ನಿಮಗೆ ಯವುದೇ ನೈತಿಕತೆ ಇಲ್ಲ ಎಂದು ಹೇಳಿದನು, 2 ನೇ ಆರೋಪಿ ಲಕ್ಷ್ಮಮ್ಮ ನಿನ್ನನ್ನು ಸ್ಮಶಾನಕ್ಕೆ ಸೇರಿಸುತ್ತೇನೆಂದು ಹೇಳಿ, ತಾನು ತಂದಿದ್ದ ಖಾರದ ಪುಡಿಯನ್ನು ನನ್ನ ಮುಖಕ್ಕೆ ಎರಚಿ, ಎಲ್ಲಾ ಆರೋಪಿಗಳು ಸಾಮೂಹಿಕವಾಗಿ ನನ್ನ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಕಾಲಿನಿಂದ ಗುಪ್ತಾಂಗಕ್ಕೆ 3-4 ಬಾರಿ ಒದ್ದರೆ ಸಾಯುವ ಸಾಧ್ಯತೆಗಳು ಇವೆ ಎಂದರೆ ನಿಜ. ಹಾಗೆ ಏಟು ಬಿದ್ದಾಗ ಸ್ಥಳದಿಂದ ಚಲಿಸಲು ಸಾಧ್ಯವಾಗುವುದಿಲ್ಲ ಎಂದರೆ ನಿಜ. ಆ ದಿನ ಬಸವರಾಜು ಮತ್ತು ಹನುಮಂತರಾಯಪ್ಪ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ನನ್ನ ಜೊತೆಗೆ ನನ್ನ ತಂದೆ, ತಾಯಿ ಮತ್ತು ಹಿತೈಷಿಗಳು ಬಂದರು. ಆ ಹಿತೈಷಿಗಳ ಹೆಸರುಗಳನ್ನು ನನ್ನ ದೂರಿನಲ್ಲಾಗಲೀ, ಹೇಳಿಕೆಯಲ್ಲಿ ಆಗಲೀ ಹೇಳಿಲ್ಲ. ಕ್ಯಾತ್ಸಂದ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಘಟನಾ ಸ್ಥಳದಿಂದ ತುಮಕೂರು ಜಿಲ್ಲಾ ಆಸ್ಪತ್ರೆಗೆ 8 ಕಿ ಮೀ ದೂರ. ಘಟನಾ ಸ್ಥಳದಿಂದ ಕ್ಯಾತ್ಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 6 ಕಿ ಮೀ ದೂರ. ಕ್ಯಾತ್ಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಜಿಲ್ಲಾ ಆಸ್ಪತ್ರೆಗೆ 5 ಕಿ ಮೀ ದೂರ. ಆಸ್ಪತ್ರೆಗೆ ನನ್ನ ಖಾಸಗಿ ವಾಹನದಲ್ಲಿ ಹೋಗಿದ್ದೆನು. ನಾನು ಇಂತಹುದೇ ವಾಹನದಲ್ಲಿ ಹೋಗಿದ್ದೇನೆಂದು ಅದರ ನಂಬರನ್ನು ದೂರಿನಲ್ಲಾಗಲೀ, ಹೇಳಿಕೆಯಲ್ಲಾಗಲೀ ಹೇಳಿಲ್ಲ. ಶಿರಾ ಆಸ್ಪತ್ರೆಗೆ ಹೋದಾಗ ಔಟ್ ಪೋಸ್ಟ್ ಗೆ ನಾನು ದೂರು ಕೊಟ್ಟಿಲ್ಲ, ನನ್ನ ತಂದೆ ತಾಯಿ ಕೊಟ್ಟಿರಬಹುದು. ನಾನು ಶಿರಾ ಆಸ್ಪತ್ರೆಗೆ ಹೋಗಿಲ್ಲ, ನನ್ನ ತಂದೆ ತಾಯಿ ನನ್ನ ಜೊತೆಗೆ ಬಂದಿಲ್ಲ ಎಂದರೆ ಸರಿಯಲ್ಲ. ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದಾಗ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ಅಥವಾ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಡುತ್ತಾರೆ ಎಂದರೆ ಇರಬಹುದು. ನಾನು ಸುಳ್ಳು ಪ್ರಮಾಣಪತ್ರ ಪಡೆಯಲು ಡಾ.ಶಿವಣ್ಣ ರೆಡ್ಡಿ ಆಸ್ಪತ್ರೆಗೆ ದಾಖಲಾಗಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಿವಣ್ಣ ರೆಡ್ಡಿ ಆಸ್ಪತ್ರೆಯಲ್ಲಿ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನಾನು ಆಸ್ಪತ್ರೆಗೆ ಹೋದಾಗ ಪ್ರಜ್ಞಾಸ್ಥಿತಿಯಲ್ಲಿದ್ದೆನು. ಆರೋಪಿತರು ಮತ್ತು ಅವರ ಮಕ್ಕಳು ಒಳ್ಳೆಯ ಹೆಸರು ಮಾಡಿದ್ದರಿಂದ ಅವರ ವಿರುದ್ಧ ಜಿದ್ದು ಸಾಧಿಸಲು ಸುಳ್ಳು ದೂರು

ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

10. ನಾನು ನಮ್ಮ ಮನೆಯಲ್ಲಿದ್ದ ಮುದ್ದೇಮಾಲುಗಳನ್ನು ಪೋಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಮಾಲುಗಳು ರೈತರ ಮನೆಗಳಲ್ಲಿ ಸಿಗುತ್ತವೆ ಎಂದರೆ ಕೆಲವೊಂದು ಸಿಗುತ್ತವೆ. ಪೋಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಮಹಜರ್ ಮಾಡಿಲ್ಲ, ನಾನು ವಕೀಲನಾಗಿದ್ದುಕೊಂಡು ಪೋಲೀಸ್ ಠಾಣೆಯಲ್ಲೆ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಪೊರಕೆಯಿಂದ ಪರಚಿದಾಗ ಗುರುತುಗಳಾಗುತ್ತವೆ ಎಂದರೆ ಗುರುತುಗಳಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಹೇಳುವಂತಹ ಮುದ್ದೇಮಾಲುಗಳನ್ನು ಉಪಯೋಗಿಸಿ ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಅಭಿವೃದ್ಧಿಯನ್ನು ಸಹಿಸಲಾಗದೆ ನಾನು ಮತ್ತು ನನ್ನ ತಂದೆ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಆ ದಿನ ಯಾವ ವಾಹನದಲ್ಲಿ ಬರುತ್ತಿದ್ದೆ ಎಂದು ಅದರ ನಂಬರ್ ದೂರಿನಲ್ಲಿ ಬರೆದಿಲ್ಲ. ನನ್ನ ವಾಹನವನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿಲ್ಲ.

11. ನನ್ನ ವಿರುದ್ಧ ಸಿಸಿ ನಂ.1412/2016 ಪ್ರಕರಣ ದಾಖಲಾಗಿದೆ ಎಂದರೆ ನಿಜ. ಈ ಪ್ರಶ್ನೆಗೆ ಮಾನ್ಯ ಸರ್ಕಾರಿ ಅಭಿಯೋಜಕರು ತಕರಾರು ಮಾಡಿರುತ್ತಾರೆ. ಸಿ.ಆರ್ ನಂ.66/2022 ರಲ್ಲಿ ವನಿತಾರವರು ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ ಎಂದರೆ ನಿಜ. ಈ ಪ್ರಶ್ನೆಗೂ ಮಾನ್ಯ ಸರ್ಕಾರಿ ಅಭಿಯೋಜಕರು ತಕರಾರು ಮಾಡಿರುತ್ತಾರೆ. ಪುನಃ ಹೇಳುತ್ತೇನೆ ಆ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಊರಿನಲ್ಲಿ ಹೆಣ್ಣುಮಕ್ಕಳನ್ನು ತುಚ್ಛವಾಗಿ ನೋಡಿದ್ದರಿಂದ ನನ್ನ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಹೆಣ್ಣುಮಕ್ಕಳ ಬಟ್ಟೆ ಎಳೆದಿದ್ದರಿಂದ ನನ್ನ ಮೇಲೆ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. ನನ್ನ ಪ್ರಕರಣ ಆರೋಪಿತರ ಮುಂದೆ ಪಂಚಾಯತಿಗೆ ಹೋಗುತ್ತದೆ ಎಂದು ಜಿದ್ದಿನಿಂದ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಹೊಡೆದಿದ್ದರಿಂದ ರಕ್ತ ಸಿಕ್ಕಾಪಟ್ಟೆ ಸೋರಿದೆ ಎಂದರೆ ನಿಜ. ಮಣ್ಣನ್ನು ಪೋಲೀಸರು ತೆಗೆದುಕೊಂಡರೇ ಎಂದು ನನಗೆ ಗೊತ್ತಿಲ್ಲ. ನಾನು ಬೇಲಿ ಮೇಲೆ ಬಿದ್ದಿದ್ದರಿಂದ ರಕ್ತ ನನ್ನ ಬಟ್ಟೆ ಮೇಲೆ ಆಗಿದೆ ಎಂದರೆ ಸರಿಯಲ್ಲ. ನಾನು ಪೋಲೀಸರೊಂದಿಗೆ ಶಾಮೀಲಾಗಿ ಬಟ್ಟೆಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಜೀವನ ಸರಿಯಾಗಿ ಮಾಡದೇ ಇದ್ದುದರಿಂದ ಆರೋಪಿತರ ವಿರುದ್ಧ ನನ್ನ ಜೀವನದಲ್ಲಿ ಮೂಗು ತೂರಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ನನಗೆ ಯಾವುದೇ ತೊಂದರೆ ಕೊಡದಿದ್ದರೂ ಕೂಡಾ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಅನೇಕ ಮಂದಿ ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಬಳಸಿದ್ದರು ಎನ್ನಲಾದ ರಾಡ್ ಎಷ್ಟು ಉದ್ದ ಇತ್ತು ಮತ್ತು ಎಷ್ಟು ದಪ್ಪ ಇತ್ತು ಎಂದು ದೂರಿನಲ್ಲಿ ಹೇಳಿಲ್ಲ. ಪೋಲೀಸರು ಯಾವುದೇ ಸ್ಥಳ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).
ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು